ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE

# ಗೋ ವಿಧೇಯಕಕ್ಕೆ ಅಸ್ತು

## ಪ್ರತಿಪಕ್ಷಗಳ ಆಕ್ರೋಶದ ನಡುವೆ ಗೋಹತ್ಯೆ ನಿಷೇಧ ವಿಧೇಯಕ ಅಂಗೀಕಾರ

## ತರಾತುರಿಯಲ್ಲಿ ಜಾರಿ ಬೇಡ: ಪ್ರತಿ ಹರಿದೆಸೆದ ವಿರೋಧ ಪಕ್ಷದ ಸದಸ್ಯರು

ವಿಧಾನ ಪರಿಷತ್ತು: ವಿಧಾನಸಭೆಯಲ್ಲಿ ಕಳೆದ ಅಧಿವೇಶನದಲ್ಲಿ ಅಂಗೀಕೃತವಾಗಿ ಸುಗ್ರೀವಾಜ್ಞೆ ಹೊರಡಿಸಲಾಗಿದ್ದ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕಕ್ಕೆ (ಗೋಹತ್ಯೆ ನಿಷೇಧ) ಮೇಲ್ಮನೆಯಲ್ಲಿ ಸೋಮವಾರ ಪ್ರತಿಪಕ್ಷಗಳ ಪ್ರತಿರೋಧದ ನಡುವೆ ಅನುಮೋದನೆ ನೀಡಲಾಯಿತು.


ಕಾಂಗ್ರೆಸ್, ಜೆಡಿಎಸ್ ಸದಸ್ಯರ ವಿರೋಧದ ನಡುವೆಯೇ ವಿಧೇಯಕ ಮಂಡಿಸಿ ಧ್ವನಿ ಮತದ ಮೂಲಕ ಅನುಮೋದನೆ ಪಡೆಯುವಲ್ಲಿ ಆಡಳಿತಾರೂಢ ಬಿಜೆಪಿ ಯಶಸ್ವಿಯಾಯಿತು. ಆ ಮೂಲಕ ರಾಜ್ಯದಲ್ಲಿ 13 ವರ್ಷದೊಳಗಿನ ಹಸು, ಕರು, ಎತ್ತು, ಕೋಣ, ಎಮ್ಮೆ ಹತ್ಯೆ ನಿಷೇಧ ಜಾರಿ ಜತೆಗೆ ನಿರಂತರವಾಗಿ ಕಾಯ್ದೆ ಉಲ್ಲಂಘನೆಗೆ 10 ಲಕ್ಷ ರೂ.ವರೆಗೆ ದಂಡ ವಿಧಿಸಲು ಅವಕಾಶವಿರುವ ವಿಧೇಯಕಕ್ಕೆ ಉಭಯ ಸದನಗಳಲ್ಲಿ ಒಪ್ಪಿಗೆ ದೊರೆತಂತಾಗಿದೆ.

ಸದನದಲ್ಲಿ ಸೋಮವಾರ ಸಂಜೆ 5 ಗಂಟೆ ಹೊತ್ತಿಗೆ ಸಚಿವ ಪ್ರಭು ಚೌಹಾಣ್ ವಿಧೇಯಕ ಮಂಡಿಸಿದರು. ಬಳಿಕ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ವಿಧೇಯಕದ ಉದ್ದೇಶ, 1964ರ ಕಾಯ್ದೆಗೆ ಪ್ರಸ್ತಾಪಿಸಿರುವ ತಿದ್ದುಪಡಿಗಳ ಬಗ್ಗೆ ವಿವರ ನೀಡಿದರು. ಕಾಂಗ್ರೆಸ್, ಜೆಡಿಎಸ್ ಸದಸ್ಯರು ವಿಧೇಯಕದ ಬಗೆಗಿನ ಆಕ್ಷೇಪಗಳನ್ನು ಸದನಕ್ಕೆ ತಿಳಿಸಿದರು.

ಗೋಶಾಲೆಗಳನ್ನು ತೆರೆಯದೆ ಕ್ರಮ ಕೈಗೊಳ್ಳದೆ ಕಾಯ್ದೆ ಜಾರಿಗೊಳಿಸುತ್ತಿರುವ ಸರಿಯಲ್ಲ, ರೈತರು ಜಾನುವಾರುಗಳನ್ನು ಸಂತೆಗೆ ಕೊಂಡೊಯ್ಯಬೇಕಾದರೂ ಸಂಬಂಧಪಟ್ಟ ಅಧಿಕಾರಿಗಳಿಂದ ದೃಢೀಕರಣ ಪಡೆಯಬೇಕು ಎಂಬುದು ರೈತರಿಗೆ ಮಾಡುವ ಅವಮಾನ. ಜರ್ಸಿ ತಳಿಯ ಹೋರಿಗಳ ಕತೆ ಏನು? ಮೃಗಾಲಯಗಳಿಗೆ ಮಾಂಸ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂಬುದಾಗಿ ಪ್ರತಿಪಕ್ಷಗಳ ಸದಸ್ಯರು ಆತಂಕ, ಆಕ್ಷೇಪ ವ್ಯಕ್ತಪಡಿಸಿದರು.

ರೈತ ಮುಖಂಡರು, ಅಲ್ಪಸಂಖ್ಯಾತ ಸಮುದಾಯದ ಮುಖಂಡರ ಜತೆ ಚರ್ಚೆ ನಡೆಸಿ ಸರ್ವಸಮ್ಮತ ಕಾಯ್ದೆ ರೂಪಿಸುವುದು ಕಾಯ್ದೆಯನ್ನು ತರಾತುರಿಯಲ್ಲಿ ಜಾರಿಗೊಳಿಸದೆ ಜಂಟಿ ಸದನ ಸಮಿತಿ ರಚಿಸಿ ವರದಿ ಪಡೆದು ಮುಂದುವರಿಯುವುದು ಸೂಕ್ತ. ಹಸು, ಎತ್ತು, ಎಮ್ಮೆ, ಕೋಣದಂತೆ ಕುರಿ, ಮೇಕೆ, ಕೋಳಿ ಹತ್ಯೆಯನ್ನು ನಿಷೇಧಿಸಬೇಕು ಎಂಬ ಸಲಹೆ, ಆಗ್ರಹಗಳು ಕೇಳಿಬಂದವು.

▶ 7ನೇ ಪುಟಕ್ಕೆ





### ಎರಡೂವರೆ ಗಂಟೆ ಚರ್ಚೆ

ಸುಮಾರು ಎರಡೂವರೆ ತಾಸು ಚರ್ಚೆಯಲ್ಲಿ ರಾಜಕೀಯ ಆರೋಪ-ಪ್ರತ್ಯಾರೋಪಕ್ಕೂ ಸದನ ಸಾಕ್ಷಿಯಾಯಿತು. ರಾತ್ರಿ 7.15ರ ಹೊತ್ತಿನಲ್ಲಿ ಇನ್ನಷ್ಟು ಹೊತ್ತು ಚರ್ಚೆಗೆ ಅವಕಾಶ ನೀಡುವಂತೆ ಪ್ರತಿಪಕ್ಷಗಳು ಒತ್ತಡ ಹೇರುತ್ತಿದ್ದಾಗ ಉಪಸಭಾಪತಿ ಎಂ.ಕೆ.ಪ್ರಾಣೇಶ್ ವಿಧೇಯಕ ಅಂಗೀಕಾರ ಪ್ರಕ್ರಿಯೆಗೆ ಸೂಚನೆ ನೀಡಿದರು. ಇದನ್ನು ವಿರೋಧಿಸಿದ ಪ್ರತಿಪಕ್ಷದ ಮುಖ್ಯ ಸಚೇತಕ ನಾರಾಯಣಸ್ವಾಮಿ ವಿಧೇಯಕ ಪ್ರತಿಯನ್ನು ಹರಿದು ಸದನದ ಬಾವಿಯತ್ತ ಎಸೆದರು. ಸದನದ ಬಾವಿಗಿಳಿದ ಕಾಂಗ್ರೆಸ್, ಜೆಡಿಎಸ್ ಸದಸ್ಯರ ಪ್ರತಿರೋಧದ ನಡುವೆ ಸದನ ವಿಧೇಯಕಕ್ಕೆ ಒಪ್ಪಿಗೆ ನೀಡಿತು. ಬಳಿಕ ಸದನವನ್ನು ಮಂಗಳವಾರಕ್ಕೆ ಮುಂದೂಡಲಾಯಿತು. ಬಿಜೆಪಿ ಸದಸ್ಯರು 'ಗೋ ಮಾತಾ ಕಿ ಜೈ', 'ಭಾರತ್ ಮಾತಾ ಕಿ ಜೈ' ಎಂದು ಘೋಷಣೆ ಕೂಗುತ್ತಾ ಸಂಭ್ರಮಿಸಿದರು.

### 14 ರಾಜ್ಯಗಳಲ್ಲಿ ಕಾಯ್ದೆ

10ರಿಂದ 17 ವರ್ಷ ಆಯಸ್ಸಿನ ಪ್ರಾಣಿಗಳನ್ನು ಕಾಯ್ದೆ ವ್ಯಾಪ್ತಿಗೆ ತರಲಾಗಿದೆ. 13 ವರ್ಷ ಮೇಲ್ಪಟ್ಟ ಕೋಣಕ್ಕೂ ವಿನಾಯ್ತಿ ನೀಡಲಾಗಿದೆ. 13 ವರ್ಷದೊಳಗಿನ ಆಕಳು, ಕರು, ಎತ್ತು, ಎಮ್ಮೆ, ಕೋಣವನ್ನು ಹತ್ಯೆ ಮಾಡುವಂತಿಲ್ಲ. ದೆಹಲಿ, ಹರ್ಯಾಣ, ಉತ್ತರ ಪ್ರದೇಶ, ರಾಜಸ್ಥಾನ ಸೇರಿದಂತೆ 14 ರಾಜ್ಯಗಳಲ್ಲಿ ಈ ರೀತಿಯ ಕಾಯ್ದೆ ಜಾರಿಯಲ್ಲಿದೆ. ಸರ್ಕಾರಿ, ಖಾಸಗಿ ಸೇರಿದಂತೆ ಒಟ್ಟು 184 ಗೋಶಾಲೆಗಳಲ್ಲಿ 50,000 ಗೋವುಗಳನ್ನು ರಕ್ಷಿಸಲಾಗುತ್ತಿದೆ. ಒಂದು ಹಸುವಿಗೆ ದಿನಕ್ಕೆ 17.5 ರೂ.ಗಳನ್ನು ಸರ್ಕಾರ ಭರಿಸಲಾಗುತ್ತಿದೆ ಎಂದು ಗೃಹಸಚಿವ ಬಸವರಾಜ ಬೊಮ್ಮಾಯಿ ಮಾಹಿತಿ ನೀಡಿದರು.



### ಮಾಂಸಾಹಾರ ಸೇವನೆಗೆ ತೊಂದರೆಯಿಲ್ಲ

ರಾಜ್ಯದಲ್ಲಿ ಕೋಳಿ, ಕುರಿ, ಮೇಕೆ ಮಾಂಸ ಬಳಸುವ ಮಂದಿ ಶೇ. 70ರಿಂದ 75ರಷ್ಟಿದ್ದು, ಇತರೆ ಜಾನುವಾರು ಮಾಂಸ ಸೇವಿಸುವವರ ಪ್ರಮಾಣ ಶೇ. 25ರಷ್ಟಿದೆ. ಹಾಗಾಗಿ ಮಾಂಸಾಹಾರ ಸೇವನೆಗೂ ಯಾವುದೇ ತೊಂದರೆಯಾಗದು. ಮೃಗಾಲಯಗಳಿಗೂ 13 ವರ್ಷ ಮೀರಿದ ಜಾನುವಾರು ಮಾಂಸ ಪೂರೈಕೆ ವ್ಯವಸ್ಥೆ ಕಲ್ಪಿಸಿ ಸಮಸ್ಯೆಯಾಗದಂತೆ ಕ್ರಮ ವಹಿಸಲಾಗುವುದು. ಒಟ್ಟಾರೆ ಗೋ ಸಂಪತ್ತು ಸಂರಕ್ಷಣೆ ದೃಷ್ಟಿಯಿಂದ ವಿಧೇಯಕ ತರಲಾಗಿದ್ದು, ಅನುಮೋದನೆ ನೀಡುವಂತೆ ಮನವಿ ಸದಸ್ಯರು ಮಾಡಿದರು. ಬಳಿಕ ಸುದೀರ್ಘ ಚರ್ಚೆ ನಡೆಯಿತು.

16

# ಗೋ ವಿಧೇಯಕಕ್ಕೆ ಅಸ್ತು

**1ನೇ ಪುಟದಿಂದ >** ಇದಕ್ಕೂ ಮುನ್ನ ವಿಧೇಯಕದ ಬಗ್ಗೆ ವಿವರ ನೀಡಿದ ಬಸವರಾಜ ಬೊಮ್ಮಾಯಿ, 1964ರಿಂದ ಜಾರಿಯಲ್ಲಿರುವ ಕಾಯ್ದೆ ಕೆಲ ಬದಲಾವಣೆ ತರಲಾಗಿದೆ. ಜಾನುವಾರು ಸಂಖ್ಯೆ, ಬೆಳವಣಿಗೆ ಆಧರಿಸಿ ಕೆಲ ಬದಲಾವಣೆ ಮಾಡಿ ಕಾನೂನಿಗೆ ಹೆಚ್ಚಿನ ಬಲ ನೀಡಲಾಗಿದೆ. ಗೋವು ಸೇರಿದಂತೆ ಇತರೆ ಪ್ರಾಣಿ ಹತ್ಯೆ ನಿಷೇಧ ಧರ್ಮದಲ್ಲೇ ಇದೆ. ಮೊಘಲರು, ಬ್ರಿಟಿಷರ ಕಾಲದಲ್ಲೂ ಗೋಹತ್ಯೆಯನ್ನು ನಿಷೇಧಿಸಲಾಗಿತ್ತು. ಮಹಾತ್ಮ ಗಾಂಧೀಜಿಯವರ ಆಶಯದಂತೆ ಗೋವಿಗೆ ಪೂಜನೀಯ ಸ್ಥಾನವಿದೆ. ಪುರಾಣಗಳಲ್ಲೂ ದೇವಾನುದೇವತೆಗಳಿಗೆ ವಾಹನಗಳಾಗಿ ಕೋಣ, ಎಮ್ಮೆ ಆಕಳು, ಹೋರಿಗಳಿದ್ದುದರ ಉಲ್ಲೇಖವಿದೆ. ಹೀಗೆ ಜನರ ಬದುಕಿನ ಸಂಗಾತಿಯಾಗಿರುವ ಪಶು ಸಂಪತ್ತು ನಶಿಸುತ್ತಿದ್ದು ಅದರ ಸಂರಕ್ಷಣೆಗೆ ಸರ್ಕಾರ ಮುಂದಾಗಿದೆ ಎಂದು ಹೇಳಿದರು. ಸದ್ಯ ವಾರ್ಷಿಕವಾಗಿ 2 ಲಕ್ಷ ಜಾನುವಾರು ಹತ್ಯೆಯಾಗುತ್ತಿದೆ ಎಂಬ ಅಂದಾಜು ಇದೆ. ಹಾಗಾಗಿ ಗೋಶಾಲೆಗಳಲ್ಲಿ ಗೋವು ಸಂರಕ್ಷಣೆ ಸಾಮರ್ಥ್ಯವನ್ನು 2 ಲಕ್ಷಕ್ಕೆ ಹೆಚ್ಚಿಸಲು, ಹೊಸ ಗೋಶಾಲೆ ತೆರೆಯಲು ಸರ್ಕಾರ ಕ್ರಮ ವಹಿಸಲಿದೆ. ಹತ್ತಾರು ಸಾವಿರ ಎಕರೆ ಕಾವಲ್ ಪ್ರದೇಶಗಳಿದ್ದು ಅಲ್ಲಿ ಪಶು ಮೇವು ಬೆಳೆಯಲು ಯೋಜನೆ ರೂಪಿಸಲಾಗುವುದು. ಬಜೆಟ್‌ನಲ್ಲಿ ವಿಶೇಷ ಅನುದಾನ ಒದಗಿಸಲು ಸಿದ್ಧತೆ ನಡೆಸಿದೆ. ಆ ಮೂಲಕ ಗೋಹತ್ಯೆ ನಿಷೇಧ ಕಾಯ್ದೆ ಜಾರಿ ಬಳಿಕ ಹೆಚ್ಚುವ ಜಾನುವಾರುಗಳ ಸಂರಕ್ಷಣೆಗೆ ಸರ್ಕಾರ ಬದ್ಧವಾಗಿದೆ ಎಂದು ಸದನಕ್ಕೆ ತಿಳಿಸಿದರು.

ಕಾಯ್ದೆ ಉಲ್ಲಂಘನೆಗೆ ಜೈಲು ಶಿಕ್ಷೆಯನ್ನು ಕನಿಷ್ಠ ಮೂರು ವರ್ಷದಿಂದ ಏಳು ವರ್ಷದವರೆಗೆ ವಿಸ್ತರಿಸಲು ಅವಕಾಶ ಕಲ್ಪಿಸಲಾಗಿದೆ. ಕನಿಷ್ಠ 50,000 ರೂ.ನಿಂದ 5 ಲಕ್ಷ ರೂ.ವರೆಗೆ ದಂಡ ವಿಧಿಸುವ ಅಂಶವಿದೆ. ಎರಡನೇ ಬಾರಿ ಇಲ್ಲವೇ ಪುನರಾವರ್ತಿತ ಉಲ್ಲಂಘನೆಗೆ ಕನಿಷ್ಠ ಒಂದು ಲಕ್ಷ ರೂ.ನಿಂದ 10 ಲಕ್ಷ ರೂ.ವರೆಗೆ ವಿಸ್ತರಿಸಬಹುದಾದ ದಂಡ ವಿಧಿಸಲು ಅವಕಾಶವಾಗಲಿದೆ. ಈವರೆಗೆ ಅಂತಾರಾಜ್ಯ ಜಾನುವಾರು ಸಾಗಣೆಗೆ ನಿರ್ಬಂಧವಿತ್ತು. ಇದೀಗ ರಾಜ್ಯದೊಳಗೂ ಜಾನುವಾರು ಸಾಗಣೆಗೆ ಕೆಲ ನಿರ್ಬಂಧ ವಿಧಿಸಲಾಗಿದೆ. ಆದರೆ ನಿರ್ದಿಷ್ಟ ಉದ್ದೇಶ, ಕಾರ್ಯಗಳಿಗೆ ಸಂಬಂಧಪಟ್ಟವರಿಂದ ಅನುಮತಿ, ದೃಢೀಕರಣ ಪಡೆದು ಸಾಗಿಸಲು ಅವಕಾಶವಿದೆ ಎಂದು ವಿವರಿಸಿದರು.